**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.   2422/2025**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಮೋಹನ್ | ಸಿ.ಡಬ್ಲ್ಯೂ–04 |
| ತಂದೆಯ ಹೆಸರು | : | ಪಾಪಯ್ಯ | ಪಿ.ಡಬ್ಲ್ಯೂ–03 |
| ವಯಸ್ಸು | : | 27 ವರ್ಷ | |
| ಉದ್ಯೋಗ | : | ಆಟೋ ಚಾಲಕ | |
| ವಾಸಸ್ಥಳ | : | ತೋಡ್ಲಾರಹಟ್ಟಿ | ದಿಃ 07–02–2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು  ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿಃ7 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 7(ಎ) ಅಂತ ಗುರುತಿಸಲಾಯಿತು.

ದಿನಾಂಕ 05.10.2025 ರಂದು ಪೊಲೀಸ್ ಠಾಣೆಯಲ್ಲಿ ನಿಪಿ.7 ಕ್ಕೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ–5 ರವರು ಹಾಜರಿದ್ದರು. ಪೊಲೀಸರು  ನನ್ನ ಸಮಕ್ಷಮ  ಆರೋಪಿಯ ವಶದಿಂದ ಪ್ಯಾಷನ್ ಪ್ರೋ ಬೈಕನ್ನು ಜಪ್ತು ಪಡಿಸಿಕೊಂಡು  ಭಾವಚಿತ್ರವನ್ನು ತೆಗೆಸಿರುತ್ತಾರೆ. ಮದ್ಯಾಹ್ನ 01.45 ರಿಂದ 02.15 ರವರೆಗೆ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ.

ನಂತರ ಅದೇ ದಿನ ನಾನು, ಚಾಸಾ–5, ಆರೋಪಿ  ಮತ್ತು ಪೊಲೀಸರು  ಚಳಳಕೆರೆ ಸರ್ಕಾರಿ ಆಸ್ಪತ್ರೆಯ ಬಳಿ ಹೋಗಿದ್ದು, ಅಲ್ಲಿ ಆರೋಪಿಯು ಕಳ್ಳತನ ಮಾಡಿದ್ದ ಜಾಗವನ್ನು ತೋರಿಸಿದ ಮೇರೆಗೆ ಪೊಲೀಸರು  ಮದ್ಯಾಹ್ನ 02.30 ರಿಂದ 03.15 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಮಹಜರ್ ಅನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಲಾಗಿರುತ್ತದೆ ನಂತರ ನಾನು ಸಹಿ ಮಾಡಿರುತ್ತೇನೆ.  ಮಹಜರ್ ಸಮಯದಲ್ಲಿ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುಸಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ  ಟಿ.ಎಸ್.ಎಂ..  ಆರೋಪಿ ಪರ ವಕೀಲರಿಂದಃ</u>**

ಮಹಜರಿಗೆ ಹಾಜರಾಗಲು ನನಗೆ ನೋಟೀಸ್  ನೀಡಿದ್ದರು. ದಿನಾಂಕ 05.10.2025 ರಂದು ನನಗೆ ನೋಟೀಸ್  ನೀಡಿದ್ದರು.  ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ  ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.   ನಾನು 36 ಮಹಜರಿಗೆ ಸಹಿ ಮಾಡಿರುತ್ತೇನೆ.   ಯಾವ ದಿನಾಂಕ ಹಾಗೂ ಯಾವ ಸಮಯದಲ್ಲಿ ಸದರಿ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಸದರಿ ಮಹಜರ್ ಗಳನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಬರೆದಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.  ಈ ಪ್ರಕರಣದಲ್ಲಿ ಜಪ್ತು ಪಡಿಸಿದ ವಾಹನದ ಇಂಜೀನ್  ಹಾಗೂ ಚಾಸ್ಸಿ ನಂಬರ್ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರಿದು ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ವಾಹನದ ನೊಂದಣಿ ಸಂಖ್ಯೆ ಇರಲಿಲ್ಲ ಎಂದು ನುಡಿಯುತ್ತಾರೆ. ಜಪ್ತು ಪಡಿಸಿಕೊಂಡ ವಾಹನಕ್ಕೆ ನೊಂದಣಿ ಸಂಖ್ಯೆ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಹಜರ್ ಸ್ಥಳದ ಚಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ.  ನನ್ನನ್ನು ಠಾಣೆಗೆ ಕರೆಸಿ ನಿಪಿ.7 ಕ್ಕೆ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.7 ರಲ್ಲಿ ಏನು ಬರೆದಿದೆ ಎಂದು ನನಗೆ ಓದಿ ತಿಳಿಸಿರುವುದಿಲ್ಲ. ಅಮಾನತ್ತು ಪಂಚನಾಮೆಯ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಜಪ್ತು ಪಡಿಸಿಕೊಂಡ ವಾಹನವು ಪ್ಯಾಷನ್ ಪ್ರೋ ಸಿಲ್ವರ್ ಬಣ್ಣದ ಗಾಡಿಯಾಗಿರುತ್ತದೆ. ಸದರಿ ವಿಚಾರವನ್ನು ಮಹಜರ್ ನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.  ಮಹಜರ್ ಸಮಯದಲ್ಲಿ ಭಾವಚಿತ್ರ ತೆಗೆದಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.  ಭಾವಚಿತ್ರದಲ್ಲಿ  ನಾನು, ಚಾಸಾ–5, 45  ಹಾಗೂ ಆರೋಪಿ  ಇದ್ದೆವು.  ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಮಹಜರ್ ಸಮಯದಲ್ಲಿ ನಾನು ಹಾಜರಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ